# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ, ಸೊರಬ

**ಸಿ.ಸಿ.ನಂ: 1808/2024**

**ಫಿರ್ಯಾದಿದಾರ:** ಕರ್ನಾಟಕ ಸರ್ಕಾರ
(ಸೊರಬ ಪೋಲಿಸರ ವತಿಯಿಂದಾ)

ವಿರುದ್ಧ

**ಆರೋಪಿಃ** ಶ್ರೀಪಾದ ಶೆಟ್ಟಿ ಬಿನ್ ವೆಂಕಟಚಲಶೆಟ್ಟಿ
ವಯಸ್ಸುಃ 64 ವರ್ಷ,
ವಾಸಃ ಮರೂರ ರೋಡ್,
ಸೊರಬ ಟೌನ್.

********

ನಾನು ಶ್ರೀ ರಾಜು.ಕೃ.ಶೇಡಬಾಳಕರ., ಬಿ.ಕಾಂ. ಎಲ್.ಎಲ್.ಬಿ., ಪ್ರಧಾನ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಸೊರಬ ನಿಮ್ಮ ಮೇಲೆ ಈ ಕೆಳಗಿನಂತೆ ಆಪಾದಿಸುತ್ತೇನೆಃ-

## ದೋಷಾರೋಪಣೆ

ದಿನಾಂಕ 20.04.2024 ರಂದು ಸಂಜೆ 5.00 ಗಂಟೆಯ ಸಮಯದಲ್ಲಿ ಸೊರಬ ಪೋಲಿಸ್ ಠಾಣೆಯ ಹದ್ದಿನ ಪೈಕಿ ಸೊರಬ ತಾಲ್ಲೂಕು ಸೊರಬ ಪಟ್ಟಣದ ಮರೂರು ರಸ್ತೆಯಲ್ಲಿರುವ ಆರೋಪಿಯಾದ ನೀನು ನಿನ್ನ ಮನೆಯ ಮುಂಭಾಗದಲ್ಲಿ ಕಾನೂನು ಬಾಹಿರವಾಗಿ ಸಾರ್ವಜನಿಕ ಗೃಹ ಬಳಕೆಯ ಗ್ಯಾಸ್ ಸಿಲೇಂಡರ್ ಗಳಿಂದ ಅಪಾಯಕಾರಿ ರೀತಿಯಲ್ಲಿ ಖಾಸಗಿ ಓಮ್ನಿ ಮತ್ತು ಆಟೋಗಳಿಗೆ ಚಿಲ್ಲರೆಯಾಗಿ ಹೆಚ್ಚಿನ ಲಾಭಕ್ಕಾಗಿ ಗ್ಯಾಸ್ ರೀಪಿಲ್ಲಿಂಗ್ ಮಾಡುವ ಸಂದರ್ಭದಲ್ಲಿ ಚಾಸಾ-1 ರವರು ಚಾಸಾ-2 ರಿಂದ ಚಾಸಾ-8 ರವರೊಂದಿಗೆ ದಾಳಿ ಮಾಡಿ

1) Indian 14.2 ಕೆ.ಜಿ ಸಾಮರ್ಥದ 3 ತುಂಬಿದ ಸಿಲೆಂಡರ್ ಗಳು, ಸದರಿ ಸಿಲೆಂಡರ್ ಗಳ ಮೇಲೆ D-27, C-27, B-33 ಎಂದು ಬೆರೆದಿದ್ದು ಇವುಗಳ ಅಂದಾಜು ಬೆಲೆ 9,210/- ರೂಗಳಾಗಿರುತ್ತವೆ.

2) ಒಂದು Indian ಕಂಪನಿಯ 14.2 ಕೆ.ಜಿ ಸಾಮರ್ಥದ ಖಾಲಿ ಸಿಲೆಂಡರ್, ಸದರಿ ಸಿಲೆಂಡರ್ ಮೇಲೆ C-25 ಎಂದು ಬರೆದಿದ್ದು ಅದರ ಅಂದಾಜು ಬೆಲೆ 2,200/- ರೂಗಳಾಗಿರುತ್ತವೆ.

3)Bharath ಕಂಪನಿಯ 14.2 ಕೆ.ಜಿ ಸಾಮರ್ಥದ 3 ಖಾಲಿ ಸಿಲೆಂಡರ್, ಸದರಿ ಸಿಲೆಂಡರ್ ಮೇಲೆ A-28, C-23, C-30 ಎಂದು ಬರೆದಿದ್ದು ಅದರ ಅಂದಾಜು ಬೆಲೆ 6,600/- ರೂಗಳಾಗಿರುತ್ತವೆ.

4) ಒಂದು ಗ್ಯಾಸ್ ರೀಫಿಲ್ಲಿಂಗ್ ಮೋಟಾರ್ ಇದ್ದು, ಅದಕ್ಕೆ ರೆಗ್ಯೂಲೇಟರ್ ಹಾಗೂ ರೀಪಿಲ್ಲಿಂಗ್ ಪಂಪ್ ಹೊಂದಿಕೊಂಡಿರುತ್ತದೆ. ಸದರಿ ಮೋಟಾರ್ ನ ಅಂದಾಜು ಬೆಲೆ 10,000/- ರೂಗಳಾಗಿರುತ್ತವೆ

5) ಗ್ಯಾಸ್ ರೀಪಿಲ್ಲಿಂಗ್ ಮೋಟಾರ್ ಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಒಂದು ಕಡೆ 3 ಪಿನ್ ಗಳ ಸುಮಾರು 12 ಅಡಿ ಉದ್ದದ ವೈಯರ್ ಇರುವ ಸ್ವಿಚ್ ಬಾಕ್ಸಗಳನ್ನು ಅಮಾನತ್ತುಪಡಿಸಿಕೊಂಡಿದ್ದು ಆ ಮೂಲಕ Liquified Petroleum Gas Supply & Control Order 2000 (U/Sec. 3, 4(1)(A), Essential Commodities Act, 1955 (U/Sec.3, 7) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

***ಈ ಮೇಲ್ಕಂಡ ಆರೋಪಗಳ ಬಗ್ಗೆ ಈ ನ್ಯಾಯಾಲಯದಲ್ಲಿ ನೀವು ವಿಚಾರಣೆಗೊಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.***

***(ದೋಷಾರೋಪಣೆಯ ವಿವರಗಳನ್ನು ಆಪರಾಧಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ನಂತರ, ಅವರು ನೀಡಿದ ಉತ್ತರಗಳನ್ನು ಸತ್ಯವಾಗಿ ಮತ್ತು ಸರಿಯಾಗಿ ಬರೆದುಕೊಂಡಿರುವನೆಂದು ದೃಢೀಕರಿಸುತ್ತೇನೆ.)***

ದಿನಾಂಕಃ 14/03/2025 ಪ್ರ. ಸಿ. ನ್ಯಾ. ಮತ್ತು ಜೆ.ಎಮ್.ಎಫ್.ಸಿ. ಸೊರಬ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ, ಸೊರಬ**

**ಸಿ.ಸಿ.ನಂ: 1808/2024**

**ಆರೋಪಿಃ** ಶ್ರೀಪಾದ ಶೆಟ್ಟಿ ಬಿನ್ ವೆಂಕಟಚಲಶೆಟ್ಟಿ

***- ಆಪಾದನೆ-***

ಪ್ರ: 1 : ನಿಮಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಆರೋಪಿ ಉ:

ಪ್ರ: 2 : ನೀವು ಗುನ್ಹಾ ಕಬೂಲಿ ಮಾಡುವಿಯೋ ಇಲ್ಲವೇ ವಿಚಾರಣೆಯಾಗಬೇಕೋ ?

ಆರೋಪಿ ಉ:

(ಆಪಾದಿತರಿಗೆ ಮೇಲೆ ಹೇಳಿದ ಆಪಾದನೆಯನ್ನು ಓದಿ ಹೇಳಲಾಯಿತು ಮತ್ತು ಅವರಿಂದ ಬಂದ ಉತ್ತರಗಳನ್ನು ನನ್ನ ಕೈ ಬರೆದುಕೊಂಡೆ ಅಂತಾ ದೃಢೀಕರಿಸುತ್ತೇನೆ)

ದಿನಾಂಕಃ 14/03/2025 ಪ್ರ. ಸಿ. ನ್ಯಾ. ಮತ್ತು ಜೆ.ಎಮ್.ಫ್.ಸಿ. ಸೊರಬ.